# ಪತ್ರಿಕಾ ಪ್ರಕಟಣೆ

## ಕು-ಖ್ಯಾತ ದ್ವಿ-ಚಕ್ರ ವಾಹನಗಳ ಕಳ್ಳನ ಬಂಧನ

ದಿನಾಂಕ:24.07.2022 ರಂದು ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಸವ ನಗರ ಬಡಾವಣೆಯ ಫಿರ್ಯಾದಿ ಶ್ರೀ ಶಿವಮೂರ್ತಿ ತಂದೆ ಮರಲಿಂಗಪ್ಪ ಶೃಂಗೇರಿ ಇವರು ಠಾಣೆಗೆ ಹಾಜರಾಗಿ ಕೊಟ್ಟ ಫಿರ್ಯಾದಿ ಅರ್ಜಿ ಸಾರಾಂಶವೇನೆಂದರೆ ದಿನಾಂಕ:18.07.2022 ರಂದು ತಮ್ಮ ದ್ವಿ-ಚಕ್ರ ವಾಹನ ಕಳ್ಳತನ ಆಗಿರುವ ಬಗ್ಗೆ ದೂರು ಸಲ್ಲಿಸಿದ ಪ್ರಕಾರ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಇರುತ್ತದೆ. ಸದರಿ ಪ್ರಕರಣದ ತನಿಖೆ ಸಲುವಾಗಿ ಶ್ರೀ ಪಂಡಿತ ಸಗರ ಪೊಲೀಸ್ ಇನ್ಸಪೇಕ್ಟರ ಅಶೋಕ ನಗರ ಪೊಲೀಸ್ ಠಾಣೆ ಇವರ ಮಾರ್ಗದರ್ಶನ ಮತ್ತು ನೇತೃತ್ವದಲ್ಲಿ ಒಂದು ತನಿಖಾ ತಂಡವನ್ನು ರಚಿಸಿದ್ದು, ಸದರಿ ತನಿಖಾ ತಂಡದಲ್ಲಿ ಶ್ರೀ ನಿಂಗಪ್ಪಾ ಎ.ಎಸ್.ಐ., ಶ್ರೀ ವೈಜನಾಥ ಹೆಚ್.ಸಿ., ಶ್ರೀ ಭೀಮಾಶಂಕರ ಹೆಚ್.ಸಿ., ಶ್ರೀ ಶಿವಲಿಂಗ್ ಪಿ.ಸಿ. ಶ್ರೀ ನೀಲಕಂಠ ಪಿ.ಸಿ. ಇವರುಗಳನ್ನು ಒಳಗೊಂಡ ತಂಡವು ಹಗಲಿರಳು ಆರೋಪಿತನ ಪತ್ತೆಗಾಗಿ ಶೋಧನೆ ಕಾರ್ಯ ಕೈಕೊಂಡು ದಿನಾಂಕ:26.07.2022 ರಂದು ಪ್ರಕರಣದಲ್ಲಿನ ಆರೋಪಿತನಾದ ಫತ್ರು ಷಾ ತಂದೆ ಪಾಶಾ ಷಾ ದರ್ವೇಶ ವಯ: 22 ವರ್ಷ ಜಾ: ಮುಸ್ಲಿಂ ಉ: ಕಿರಾಣಿ ಅಂಗಡಿಯಲ್ಲಿ ಕೆಲಸ ಸಾ|| ಸಿದ್ಧಾರೂಢ ಕಾಲೋನಿ ಕಪನೂರ ಇತನಿಗೆ ದಸ್ತಗಿರಿಮಾಡಿ ಸದರಿಯವನಿಂದ ವಿವಿಧ ಸಮೂನೆಯ ಒಟ್ಟು 13 ದ್ವಿ-ಚಕ್ರ ವಾಹನಗಳು ಅಂದಾಜು 6.00.000/- ಕಿಮ್ಮತ್ತಿನ ದ್ವಿ-ಚಕ್ರ ವಾಹನಗಳನ್ನು ಜಪ್ತಿ ಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ. ಆರೋಪಿತನನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಕ್ಕಾಗಿ ಮಾನ್ಯ ಪೊಲೀಸ್ ಆಯುಕ್ತರು, ಮಾನ್ಯ ಉಪ ಪೊಲೀಸ್ ಆಯುಕ್ತರು, ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು ತಂಡದ ಯಶಸ್ವಿಗಾಗಿ ಶ್ಲಾಘಿಸಿರುತ್ತಾರೆ.

ಪೊಲೀಸ್ ಇನ್ಸಪೆಕ್ಟರ
ಅಶೋಕ ನಗರ ಪೊಲೀಸ ಠಾ
ಕಲಬುರಗಿ ನಗರ